# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ | 625 |
| ಸದಸ್ಯರ ಹೆಸರು | ಶ್ರೀ ಮಧು.ಜಿ. ಮಾದೇಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 23-02-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯ ವ್ಯಾಪ್ತಿಯ ಸಹಕಾರ ಸಂಘಗಳು ರೈತರಿಗೆ ವಿತರಿಸಿರುವ ರಸಗೊಬ್ಬರಗಳು ನಕಲಿ ಹಾಗೂ ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; | ಸಹಕಾರ ಇಲಾಖೆಯ ವ್ಯಾಪ್ತಿಯ ಕೆಲವು ಸಹಕಾರ ಸಂಘಗಳು ರೈತರಿಗೆ ವಿತರಿಸಿರುವ ರಸಗೊಬ್ಬರಗಳು ನಕಲಿ ಹಾಗೂ ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ನಕಲಿ ರಸಗೊಬ್ಬರ ಉತ್ಪಾದನೆ/ಮಾರಾಟ ಮಾಡುತ್ತಿರುವ ಪ್ರಕರಣಗಳು ಕಂಡು ಬಂದ ಕೂಡಲೇ ಸದರಿ ರಸಗೊಬ್ಬರವನ್ನು ಜಪ್ತು ಮಾಡಿ ತಪ್ಪಿತಸ್ಥರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಿ, ತನಿಖೆಗೆ ಒಳಪಡಿಸಲಾಗುತ್ತಿದೆ.<br><br>ಮುಂದುವರೆದು ಕಳಪೆ ರಸಗೊಬ್ಬರ ಮಾದರಿಗಳಿಗೆ ಸಂಬಂಧಿಸಿದಂತೆ, ರಸಗೊಬ್ಬರ (ನಿಯಂತ್ರಣ) ಆದೇಶ, 1985 ಕ್ಲಾಸ್ 19(a)/(b)ರ ಉಲ್ಲಂಘನೆ ಸಂಬಂಧ ರಸಗೊಬ್ಬರ ಪರಿವೀಕ್ಷಕರು ಸಂಬಂಧಪಟ್ಟ ಮಾರಾಟಗಾರರು/ ಸರಬರಾಜುದಾರರು/ ಉತ್ಪಾದಕರ ವಿರುದ್ಧ ದಂಡ ಪ್ರಕ್ರಿಯೆ ಸಂಹಿತೆ, 1973ರ ಕಲಂ 200ರಡಿ ಆ ವ್ಯಾಪ್ತಿಯ ನ್ಯಾಯಾಲಯದಲ್ಲಿ ನಿಯಮಾನುಸಾರ ಮೊಕದ್ದಮೆ ಹೂಡಿ ಕ್ರಮವಹಿಸುತ್ತಿದ್ದಾರೆ.<br><br>ರಾಜ್ಯದಲ್ಲಿ ನಕಲಿ ಹಾಗೂ ಕಳಪೆ ರಸಗೊಬ್ಬರ ಮಾರಾಟ ಮಾಡುತ್ತಿರುವುದನ್ನು ತಡೆಗಟ್ಟಲು, ಕೇಂದ್ರ ಸರ್ಕಾರ ರೂಪಿಸಿರುವ ರಸಗೊಬ್ಬರ (ನಿಯಂತ್ರಣ) ಆದೇಶ, 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆ, 1955 ಜಾರಿಯಲ್ಲಿದ್ದು, ಸದರಿ ಆದೇಶದನ್ವಯ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಅಧಿಕಾರಿಗಳು ಹಾಗೂ ಕೃಷಿ ಪದವಿ ಹೊಂದಿರುವ ಸಹಾಯಕ ಕೃಷಿ ಅಧಿಕಾರಿಗಳನ್ನು ರಸಗೊಬ್ಬರ ಪರಿವೀಕ್ಷಕರಾಗಿ ರಸಗೊಬ್ಬರ (ನಿಯಂತ್ರಣ) ಆದೇಶ, 1985 ಕ್ಲಾಸ್ 27ರನ್ವಯ ಅಧಿಸೂಚಿಸಲಾಗಿರುತ್ತದೆ. ರೈತರಿಗೆ ಗುಣಮಟ್ಟದ ರಸಗೊಬ್ಬರಗಳು ದೊರಕುವಂತೆ ನಿಗಾವಹಿಸಲು, ಪ್ರತಿ ಸಾಲಿನಲ್ಲಿ ಗುಣನಿಯಂತ್ರಣ ಕಾರ್ಯಕ್ರಮದಡಿ ಎಲ್ಲಾ ರಸಗೊಬ್ಬರ ಪರಿವೀಕ್ಷಕರಿಗೆ ಗ್ರೇಡ್‌ವಾರು ಗುರಿ ನಿಗಧಿಪಡಿಸಿ, ಗುರಿಯಂತೆ ವಿವಿಧ ಗ್ರೇಡ್‌ಗಳ ರಸಗೊಬ್ಬರದ ಮಾದರಿಗಳನ್ನು ನಿಯಮಾನುಸಾರ |

| | | |
|---|---|---|
| | | ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಿ, ವಿಶ್ಲೇಷಣೆಯಲ್ಲಿ ಕಳಪೆ ಎಂದು ವರದಿಯಾದ ಮಾದರಿಗಳ ಮೇಲೆ ರಸಗೊಬ್ಬರ (ನಿಯಂತ್ರಣ) ಆದೇಶ, 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆ, 1955ರನ್ವಯ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ.<br><br>ಅದಲ್ಲದೇ, ರಾಜ್ಯದಲ್ಲಿ ಅಪರ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ಜಾಗೃತಕೋಶ ಸೃಜಿಸಲಾಗಿದೆ ಮತ್ತು ಇವರ ಅಧೀನದಲ್ಲಿ ರಾಜ್ಯದ 4 ವಿಭಾಗಗಳಲ್ಲಿ (ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ) ಜಂಟಿ ಕೃಷಿ ನಿರ್ದೇಶಕರು(ಜಾಗೃತಕೋಶ) ಕಾರ್ಯನಿರ್ವಹಿಸುತ್ತಿದ್ದಾರೆ. ಜಾಗೃತ ಕೋಶದ ಅಧಿಕಾರಿಗಳು, ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು(ಜಾರಿದಳ) ಮತ್ತು ಅಧಿಸೂಚಿಸಿರುವ ರಸಗೊಬ್ಬರ ಪರಿವೀಕ್ಷಕರು ದೂರುಗಳನ್ನು ಆಧರಿಸಿ/ಅನಿರೀಕ್ಷಿತವಾಗಿ ಅವರ ವ್ಯಾಪ್ತಿಯಲ್ಲಿನ ರಸಗೊಬ್ಬರ ಮಾರಾಟ ಮಾಡುತ್ತಿರುವ ಸಹಕಾರ ಸಂಘಗಳ ಮಳಿಗೆ/ಗೋದಾಮು, ಮಾರಾಟಗಾರರ ಮಳಿಗೆ/ಗೋದಾಮು ಮತ್ತು ತಯಾರಿಕಾ ಘಟಕಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಪರಿಶೀಲನೆಯನ್ನು ಕೈಗೊಂಡು, ಪರಿಶೀಲನೆಯ ಸಂದರ್ಭದಲ್ಲಿ ನಕಲಿ/ಕಳಪೆ ರಸಗೊಬ್ಬರ ದಾಸ್ತಾನು/ಇತರೆ ಉಲ್ಲಂಘನೆಗಳು ಕಂಡು ಬಂದಲ್ಲಿ ರಸಗೊಬ್ಬರ (ನಿಯಂತ್ರಣ) ಆದೇಶ, 1985ರನ್ವಯ ಕ್ರಮ ಜರುಗಿಸುತ್ತಿದ್ದಾರೆ.<br><br>ರಸಗೊಬ್ಬರಗಳು ಅಗತ್ಯ ವಸ್ತುಗಳ ಕಾಯ್ದೆ, 1955ರಡಿ ಸೇರ್ಪಡೆಯಾಗಿದ್ದು, ಜಿಲ್ಲೆಯ ಜಿಲ್ಲಾಧಿಕಾರಿಗಳು ಸದರಿ ಪರಿಕರದ ಉಸ್ತುವಾರಿ ಸಮಿತಿಯ ಅಧ್ಯಕ್ಷರಾಗಿದ್ದು ಪ್ರತಿ ಹಂಗಾಮಿನಲ್ಲಿ ರಸಗೊಬ್ಬರ ಪೂರೈಕೆ ಮತ್ತು ಗುಣಮಟ್ಟದ ಬಗ್ಗೆ ಪರಿಶೀಲಿಸುತ್ತಿದ್ದಾರೆ. |
| ಆ) | ವಿತರಣೆ ಮಾಡಿದ ಸೊಸೈಟಿಗಳಿಗೆ ಗೊಬ್ಬರ ಪೂರೈಕೆ ಮಾಡಿದ ಕಂಪನಿ ವಿರುದ್ಧ ಕ್ರಮಕ್ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆಯೇ; ಹಾಗಿದ್ದಲ್ಲಿ, ಕ್ರಮದ ಸ್ವರೂಪವೇನು; | ರಾಜ್ಯದಲ್ಲಿ ನಕಲಿ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಿದ್ದ ಹಾಗೂ ಅದರಲ್ಲಿ ಭಾಗಿಯಾದ ವ್ಯಕ್ತಿಗಳನ್ನು ಗುರುತಿಸಿ ಪೊಲೀಸ್ ಠಾಣೆಗಳಲ್ಲಿ ಎಫ್.ಐ.ಆರ್ ಗಳನ್ನು ದಾಖಲಿಸಲಾಗಿದೆ. ದಾಖಲಿಸಿರುವ ಕೆಲವು ಪ್ರಕರಣಗಳು ಅಂತರ ರಾಜ್ಯ ವ್ಯಾಪ್ತಿಗೆ ಒಳಪಡುವುದರಿಂದ ಹಾಗೂ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವ ಅವಶ್ಯಕತೆ ಇದ್ದುದರಿಂದ 9 ಪ್ರಕರಣಗಳನ್ನು ಸರ್ಕಾರದ ಆದೇಶ ಸಂ:ಹೆಚ್.ಡಿ/58/ಸಿ.ಒ.ಡಿ/2022, ದಿನಾಂಕ:18.01.2023 ರನ್ವಯ ಸಿ.ಐ.ಡಿ. ತನಿಖೆಗೆ ವಹಿಸಲಾಗಿರುತ್ತದೆ. (ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ). |

| | | |
|---|---|---|
| | | ಮುಂದುವರೆದು, ಕಳಪೆ ರಸಗೊಬ್ಬರಗಳಿಗೆ ಸಂಬಂಧಿಸಿದಂತೆ, ರಸಗೊಬ್ಬರ (ನಿಯಂತ್ರಣ) ಆದೇಶ, 1985 ಕ್ಲಾಸ್ 19(a)/(b)ರ ಉಲ್ಲಂಘನೆ ಸಂಬಂಧ ರಸಗೊಬ್ಬರ ಪರಿವೀಕ್ಷಕರು ಸಂಬಂಧಪಟ್ಟ ಮಾರಾಟಗಾರರು/ ಸರಬರಾಜುದಾರರು/ ಉತ್ಪಾದಕರ ವಿರುದ್ಧ ದಂಡ ಪ್ರಕ್ರಿಯೆ ಸಂಹಿತೆ, 1973ರ ಕಲಂ 200ರಡಿ ಆ ವ್ಯಾಪ್ತಿಯ ನ್ಯಾಯಾಲಯದಲ್ಲಿ ನಿಯಮಾನುಸಾರ ಮೊಕದ್ದಮೆ ಹೂಡಿ ಕ್ರಮವಹಿಸುತ್ತಿದ್ದಾರೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಯಾವ ಯಾವ ಸೊಸೈಟಿಗಳಲ್ಲಿ ಈ ರೀತಿ ನಕಲಿ ಹಾಗೂ ಕಳಪೆ ಗುಣಮಟ್ಟದ ಗೊಬ್ಬರ ವಿತರಣೆ ಆಗಿರುವ ಬಗ್ಗೆ ದೂರುಗಳು ಸ್ವೀಕೃತವಾಗಿವೆ; ಈ ದೂರುಗಳ ಸಂಬಂಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸೊಸೈಟಿಗಳಲ್ಲಿ ನಕಲಿ ಹಾಗೂ ಕಳಪೆ ಗುಣಮಟ್ಟದ ರಸಗೊಬ್ಬರಕ್ಕೆ ಸಂಬಂಧಿಸಿದಂತೆ ಕ್ರಮವಾಗಿ ಒಟ್ಟು 05 ಮತ್ತು 15 ಪ್ರಕರಣಗಳು ವರದಿಯಾಗಿರುತ್ತವೆ. ವಿವರಗಳನ್ನು ಅನುಬಂಧ-02 ಮತ್ತು 03 ರಲ್ಲಿ ಒದಗಿಸಲಾಗಿದೆ. |
| ಈ) | ಕಳಪೆ ಮತ್ತು ನಕಲಿ ಗೊಬ್ಬರ ಬಳಸಿ ಬೆಳೆ ಬೆಳೆದು ನಷ್ಟಕ್ಕೊಳಗಾದ ರೈತರಿಗೆ ಸರ್ಕಾರ ಪರಿಹಾರ ನೀಡಲಿದೆಯೇ; ಇದಕ್ಕೆ ಯಾವ ರೀತಿಯ ಕ್ರಮಕೈಗೊಳ್ಳಲಾಗಿದೆ? (ವಿವರ ನೀಡುವುದು) | ಕಳಪೆ ಮತ್ತು ನಕಲಿ ಗೊಬ್ಬರ ಬಳಸಿ ಬೆಳೆ ಬೆಳೆದು ನಷ್ಟಕ್ಕೊಳಗಾದ ರೈತರಿಗೆ ರಸಗೊಬ್ಬರ (ನಿಯಂತ್ರಣ) ಆದೇಶ, 1985ರಡಿ ಪರಿಹಾರ ನೀಡಲು ಅವಕಾಶವಿರುವುದಿಲ್ಲ.<br><br>ಈ ಸಂಬಂಧ ಸರ್ಕಾರ ಯಾವುದೇ ಪರಿಹಾರ ನೀಡುತ್ತಿರುವುದಿಲ್ಲ. |

ಸಂಖ್ಯೆ: AGRI/25/ACT/2024

19/2

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

ಅನುಬಂಧ-01 Email 1/2/2023

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಕಳಪೆ ಗುಣಮಟ್ಟದ ಕೃಷಿ ಪರಿಕರಗಳನ್ನು ಮಾರಾಟ ಮಾಡುತ್ತಿದ್ದ ಹಾಗೂ ಅದರಲ್ಲಿ ಭಾಗಿಯಾದ ವ್ಯಕ್ತಿಗಳ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಿಸಿರುವ ಪ್ರಕರಣಗಳನ್ನು ಸಿಐಡಿ ತನಿಖೆಗೆ ವಹಿಸುವ ಬಗ್ಗೆ.

ಓದಲಾಗಿದೆ: ಕೃಷಿ ಇಲಾಖೆ ಕಡತ ಸಂಖ್ಯೆ:AGRI-ASC/65/2022(P1)

4105

**ಪ್ರಸ್ತಾವನೆ:-**

ಮೇಲೆ ಓದಲಾದ ಕೃಷಿ ಇಲಾಖೆಯ ಕಡತದಲ್ಲಿ, ರಾಜ್ಯದಲ್ಲಿ ಕೃಷಿ ಪರಿಕರಗಳನ್ನು ಉತ್ತಮ ಗುಣಮಟ್ಟದಲ್ಲಿ ರೈತರಿಗೆ ತಲುಪಿಸುವ ದೃಷ್ಠಿಯಿಂದ ಕೃಷಿ ಇಲಾಖೆಯಲ್ಲಿ ರಚಿಸಲಾದ ಜಾಗೃತ ಕೋಶ ವಿಭಾಗದ ಅಧಿಕಾರಿಗಳು ಕಳಪೆ ಗುಣಮಟ್ಟದ ಕೃಷಿ ಪರಿಕರಗಳನ್ನು ಮಾರಾಟ ಮಾಡುತ್ತಿದ್ದ ಹಾಗೂ ಅದರಲ್ಲಿ ಭಾಗಿಯಾದ ವ್ಯಕ್ತಿಗಳನ್ನು ಹಿಡಿದು ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ದಾಖಲಿಸಿರುವ ಪ್ರಕರಣಗಳು ಅಂತರ್-ರಾಜ್ಯ ವ್ಯಾಪ್ತಿಗೆ ಒಳಪಡುವುದರಿಂದ ಹಾಗೂ ಇನ್ನೂ ಹೆಚ್ಚಿನ ಮಾಹಿತಿಯನ್ನು ಕಲೆ ಹಾಕುವ ಅಗತ್ಯತೆ ಇರುವುದರಿಂದ ಈ ಕೆಳಕಂಡ 09 ಪ್ರಕರಣಗಳನ್ನು ಸಿಐಡಿ ತನಿಖೆಗೆ ವಹಿಸುವಂತೆ ಕೃಷಿ ಇಲಾಖೆಯಿಂದ ಪ್ರಸ್ತಾವನೆಯು ಸ್ವೀಕೃತವಾಗಿರುತ್ತದೆ.

| ಕ್ರ.ಸಂ. | ಜಿಲ್ಲೆ | ಪೊಲೀಸ್ ಠಾಣೆ | ಅಪರಾಧ ಸಂಖ್ಯೆ |
|---|---|---|---|
| 1. | ಚಿತ್ರದುರ್ಗ | ಹೊಳಲ್ಕೆರೆ | 0257/2022 |
| 2. | ಕೋಲಾರ | ಮುಳಬಾಗಿಲು ಟೌನ್ | 0078/2022 |
| 3. | ಮಂಡ್ಯ | ಕಿರುಗಾವಲು | 0014/2022 |
| 4. | ಮಂಡ್ಯ | ಹಲಗೂರು | 0028/2022 |
| 5. | ಗದಗ | ರೋಣ | 0167/2022 |
| 6. | ಚಿತ್ರದುರ್ಗ | ಚಿತ್ರದುರ್ಗ ಟೌನ್ | 0161/2022 |
| 7. | ಚಿತ್ರದುರ್ಗ | ಭರಮಸಾಗರ | 0221/2022 |
| 8. | ವಿಜಯನಗರ | ಹಡಗಲಿ | 0111/2022 |
| 9. | ಯಾದಗಿರಿ | ವಡಿಗೇರೆ | 0063/2022 |

ADO(OF)

ಈ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 58 ಸಿಒಡಿ 2022, ಬೆಂಗಳೂರು,</u>**

**<u>ದಿನಾಂಕ.18/01/2023.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಕಳಪೆ ಗುಣಮಟ್ಟದ ಕೃಷಿ ಪರಿಕರಗಳನ್ನು ಮಾರಾಟ ಮಾಡುತ್ತಿದ್ದ ಹಾಗೂ ಅದರಲ್ಲಿ ಭಾಗಿಯಾದ ವ್ಯಕ್ತಿಗಳ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಿಸಿರುವ ಈ ಕೆಳಕಂಡ ಪ್ರಕರಣಗಳನ್ನು ಹೆಚ್ಚಿನ ತನಿಖೆಗಾಗಿ ಸಿಐಡಿಗೆ ವಹಿಸಿ ಆದೇಶಿದೆ.

ADA(FRT)

JDA(FRT&PP)

4284 10/2/23

| ಕ್ರ.ಸಂ. | ಜಿಲ್ಲೆ | ಪೊಲೀಸ್ ಠಾಣೆ | ಅಪರಾಧ ಸಂಖ್ಯೆ |
|---|---|---|---|
| 1. | ಚಿತ್ರದುರ್ಗ | ಹೊಳಲ್ಕೆರೆ | 0257/2022 |
| 2. | ಕೋಲಾರ | ಮುಳಬಾಗಿಲು ಟೌನ್ | 0078/2022 |
| 3. | ಮಂಡ್ಯ | ಕಿರುಗಾವಲು | 0014/2022 |
| 4. | ಮಂಡ್ಯ | ಹಲಗೂರು | 0028/2022 |
| 5. | ಗದಗ | ರೋಣ | 0167/2022 |
| 6. | ಚಿತ್ರದುರ್ಗ | ಚಿತ್ರದುರ್ಗ ಟೌನ್ | 0161/2022 |
| 7. | ಚಿತ್ರದುರ್ಗ | ಭರಮಸಾಗರ | 0221/2022 |
| 8. | ವಿಜಯನಗರ | ಹಡಗಲಿ | 0111/2022 |
| 9. | ಯಾದಗಿರಿ | ವಡಿಗೇರೆ | 0063/2022 |

ಈ ತನಿಖೆಯನ್ನು ನಡೆಸಲು ಕೃಷಿ ಇಲಾಖೆಯು ಸಿಐಡಿ ತಂಡದವರಿಗೆ ಸಂಪೂರ್ಣ ಸಹಕಾರ ಮತ್ತು ಅವಶ್ಯ ಮಾಹಿತಿ /ದಾಖಲಾತಿಗಳನ್ನು ಒದಗಿಸುವುದು.

ಸಿಐಡಿ ತಂಡವು ಈ ಪ್ರಕರಣಗಳ ತನಿಖೆಯನ್ನು ಶೀಘ್ರವಾಗಿ ಪೂರ್ಣಗೊಳಿಸಿ ತನಿಖಾ ವರದಿಯನ್ನು ಸಕ್ಷಮ ನ್ಯಾಯಾಲಯಕ್ಕೆ ತ್ವರಿತವಾಗಿ ಸಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳುವುದು ಮತ್ತು ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

13/1/23

**(ಮುಹಮ್ಮದ್ ಇಬ್ರಾಹಿಂ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಅಪರಾಧಗಳು)

**ಇವರಿಗೆ:**

1. ಮಹಾ ನಿರ್ದೇಶಕರು ಹಾಗೂ ಆರಕ್ಷಕ ಮಹಾ ನಿರೀಕ್ಷಕರು ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು.
2. ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ, ವಿಶೇಷ ಘಟಕಗಳು ಹಾಗೂ ಆರ್ಥಿಕ ಅಪರಾಧಗಳು, ಕಾರ್ಲಟನ್ ಭವನ, ಬೆಂಗಳೂರು.
3. ಹೆಚ್ಚುವರಿ ಪ್ರತಿ/ಶಾಖಾ ರಕ್ಷ ಕಡತ.

14/01/23

**ಪ್ರತಿಯನ್ನು:**

1. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.

..3

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ರವರ ಹಿರಿಯ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ(ಪಿ.ಸಿ.ಎ.ಎಸ್), ಒಳಾಡಳಿತ ಇಲಾಖೆ ರವರ ಆಪ್ತ ಕಾರ್ಯದರ್ಶಿ ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ರವರ ಆಪ್ತ ಕಾರ್ಯದರ್ಶಿ ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ(ಅಪರಾಧಗಳು, ಸೆರೆಮನೆ ಮತ್ತು ಸಿನಿಮಾ), ಒಳಾಡಳಿತ ಇಲಾಖೆ ರವರ ಆಪ್ತ ಸಹಾಯಕರು, ವಿಧಾನಸೌಧ, ಬೆಂಗಳೂರು.

## ಅನುಬಂಧ-02

## ರಾಜ್ಯದಲ್ಲಿ ಸೊಸೈಟಿಗಳ ಮುಖಾಂತರ ನಕಲಿ ರಸಗೊಬ್ಬರ ಮಾರಾಟಕ್ಕೆ ಸಂಬಂಧಿಸಿದ ವಿವರ

| ಕ್ರ. ಸಂ. | ವರ್ಷ | ಜಿಲ್ಲೆ | ಸೊಸೈಟಿಯ ಹೆಸರು ಮತ್ತು ವಿಳಾಸ | ದಾಸ್ತಾನು ಮಟ್ಟುಗೋಲು ಹಾಕಿಕೊಂಡಿರುವ ರಸಗೊಬ್ಬರದ ವಿವರ | | | ಎಫ್.ಐ.ಆರ್ ಸಂಖ್ಯೆ |
|---|---|---|---|---|---|---|---|
| | | | | ರಸಗೊಬ್ಬರದ ಗ್ರೇಡ್ | ಪ್ರಮಾಣ ಮೆ.ಟನ್ ಗಳಲ್ಲಿ) | ಮೊತ್ತ (ಲಕ್ಷ ರೂ ಗಳಲ್ಲಿ) | |
| 1 | 2021-22 | ಬಾಗಲಕೋಟೆ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಅಲಬಾಳ, ಜಮಖಂಡಿ ತಾಲ್ಲೂಕು. | ನಕಲಿ ಅಮೋನಿಯಂ ಸಲ್ಪೇಟ್ | 7.5 | 1.29 | 875/2022 |
| 2 | | ಬೆಳಗಾವಿ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ನದಿ ಇಂಗಳಗಾಂವ, ಅಥಣಿ ತಾಲೂಕು. | ನಕಲಿ ಅಮೋನಿಯಂ ಸಲ್ಪೇಟ್ | 0 | 0 | 55/2022* |
| 3 | | ಕೊಡಗು | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ, ಸಂಘ, ಕಡಗದಾಳು, ಮಡಿಕೇರಿ ತಾಲ್ಲೂಕು. | ನಕಲಿ 17:17:17 ಮಿಶ್ರಣ | 5.5 | 1.144 | 47/2022 |
| 4 | | ಮಂಡ್ಯ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಸುಜ್ಜಲೂರು, ಮಳವಳ್ಳಿ ತಾಲ್ಲೂಕು. | ನಕಲಿ ಡಿ.ಎ.ಪಿ | 19.35 | 4.5 | 0014/2022 |
| 5 | | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಡಿ. ಹಲಸಹಳ್ಳಿ, ಮಳವಳ್ಳಿ ತಾಲ್ಲೂಕು. | ನಕಲಿ ಡಿ.ಎ.ಪಿ | 4.6 | 1.08 | 0028/2022 |
| ಒಟ್ಟು | | | | | 36.95 | 8.014 | |

*ಸೂಚನೆ: ಖಾಸಗಿ ಮಾರಾಟ ಮಳಿಗೆಯಲ್ಲಿ ಮಾರಾಟವಾಗಿರುವ ನಕಲಿ ಅಮೋನಿಯಮಂ ಸಲ್ಪೇಟ್ ಅನ್ನೇ(same batch) ಸದರಿ ಸೊಸೈಟಿಯವರು ಮಾರಾಟ ಮಾಡಿರುವ ಕಾರಣ ದಾಖಲಾತಿಗಳ ಆಧಾರದ ಮೇಲೆ ಎಫ್.ಐ.ಆರ್ ದಾಖಲಿಸಲಾಗಿದೆ.

## ಅನುಬಂಧ-03

| ರಾಜ್ಯದಲ್ಲಿ ಸೊಸೈಟಿಗಳ ಮುಖಾಂತರ ಕಳಪೆ ರಸಗೊಬ್ಬರ ಮಾರಾಟಕ್ಕೆ ಸಂಬಂಧಿಸಿದ ವಿವರ | | | | | | |
|---|---|---|---|---|---|---|
| ಕ್ರ. ಸಂ. | ವರ್ಷ | ಜಿಲ್ಲೆ | ಸೊಸೈಟಿಯ ಹೆಸರು ಮತ್ತು ವಿಳಾಸ | ರಸಗೊಬ್ಬರದ ಗ್ರೇಡ್ | ಮೊಕದ್ದಮೆ ಸಂಖ್ಯೆ | ಷರಾ |
| 1 | 2020-21 | ಹಾವೇರಿ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಹಂಸಭಾವಿ, ಹಿರೇಕೆರೂರ ತಾಲ್ಲೂಕು | ಪೋಶಕ್- ಸಾವಯವ ಗೊಬ್ಬರ(ಡಿ.ಎನ್.ಪಿ-ಜಿ) Dynamic Nutrient Provider (P-10.45%, OC-8%) | CC No 729/2022 | ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |
| 2 | | | | | CC No 730/2022 | ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |
| 3 | 2022-23 | ಹಾವೇರಿ | ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘ, ರಾಣೇಬೆನ್ನೂರು ತಾಲ್ಲೂಕು | 10-26-26 ಕಾಂಪ್ಲೆಕ್ಸ್ | PCR-293/2023 | ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |
| 4 | | | ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘ, ರಾಣೇಬೆನ್ನೂರು, ತಾಲ್ಲೂಕು | 10-26-26 ಕಾಂಪ್ಲೆಕ್ಸ್ | PCR-294/2024 | ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |
| 5 | | ಬಾಗಲಕೋಟೆ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಮುಂಡಗನೂರು, ಬೀಳಗಿ ತಾಲ್ಲೂಕು | 17:17:17 ಮಿಶ್ರಣ | - | ಪರಿಶೀಲನೆಗಾಗಿ ದಾಖಲಾತಿಗಳನ್ನುಸರ್ಕಾರಿ ಅಭಿಯೋಜಕರಿಗೆ ಸಲ್ಲಿಸಲಾಗಿದೆ. |
| 6 | | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಮುಂಡಗನೂರು, ಬೀಳಗಿ ತಾಲ್ಲೂಕು | PROM ರಂಜಕಯುಕ್ತ ಸಾವಯವ ಗೊಬ್ಬರ | - | ಪರಿಶೀಲನೆಗಾಗಿ ದಾಖಲಾತಿಗಳನ್ನುಸರ್ಕಾರಿ ಅಭಿಯೋಜಕರಿಗೆ ಸಲ್ಲಿಸಲಾಗಿದೆ. |
| 7 | | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಅರಕೇರಿ, ಬೀಳಗಿ ತಾಲ್ಲೂಕು | 17:17:17 ಮಿಶ್ರಣ | - | ಪರಿಶೀಲನೆಗಾಗಿ ದಾಖಲಾತಿಗಳನ್ನುಸರ್ಕಾರಿ ಅಭಿಯೋಜಕರಿಗೆ ಸಲ್ಲಿಸಲಾಗಿದೆ. |
| 8 | | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಜಮಖಂಡಿ ತಾಲ್ಲೂಕು | 17:17:17 ಮಿಶ್ರಣ | - | ಪರಿಶೀಲನೆಗಾಗಿ ದಾಖಲಾತಿಗಳನ್ನುಸರ್ಕಾರಿ ಅಭಿಯೋಜಕರಿಗೆ ಸಲ್ಲಿಸಲಾಗಿದೆ. |
| 9 | | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ತುಂಗಳ, ಜಮಖಂಡಿ ತಾಲ್ಲೂಕು | 17:17:17 ಮಿಶ್ರಣ | - | ಪರಿಶೀಲನೆಗಾಗಿ ದಾಖಲಾತಿಗಳನ್ನುಸರ್ಕಾರಿ ಅಭಿಯೋಜಕರಿಗೆ ಸಲ್ಲಿಸಲಾಗಿದೆ. |
| 10 | | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ತುಂಗಳ, ಜಮಖಂಡಿ ತಾಲ್ಲೂಕು | ರಂಜಕಯುಕ್ತ ಸಾವಯವ ಗೊಬ್ಬರ | - | ಪರಿಶೀಲನೆಗಾಗಿ ದಾಖಲಾತಿಗಳನ್ನುಸರ್ಕಾರಿ ಅಭಿಯೋಜಕರಿಗೆ ಸಲ್ಲಿಸಲಾಗಿದೆ. |
| 11 | | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಕೊಡ್ಲಿಪೇಟೆ, ಸೋಮವಾರಪೇಟೆ ತಾಲ್ಲೂಕು | 17:17:17 ಮಿಶ್ರಣ | 39/2023 | ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |

| ಕ್ರ. ಸಂ. | ವರ್ಷ | ಜಿಲ್ಲೆ | ಸೊಸೈಟಿಯ ಹೆಸರು ಮತ್ತು ವಿಳಾಸ | ರಸಗೊಬ್ಬರದ ಗ್ರೇಡ್ | ಮೊಕದ್ದಮೆ ಸಂಖ್ಯೆ | ಷರಾ |
|---|---|---|---|---|---|---|
| 12 | | ಕೊಡಗು | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಮಾಯಮುಡಿ, ವಿರಾಜಪೇಟೆ ತಾಲ್ಲೂಕು | 17:17:17 ಮಿಶ್ರಣ | 109/2023 | ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |
| 13 | | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಮಾಯಮುಡಿ, ವಿರಾಜಪೇಟೆ ತಾಲ್ಲೂಕು | 17:17:17 ಮಿಶ್ರಣ | 48/2023 | ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |
| 14 | | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಕುಟ್ಟ, ಪೊನ್ನಂಪೇಟೆ ತಾಲ್ಲೂಕು | 17:17:17 ಮಿಶ್ರಣ | 99/2023 | ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |
| 15 | | ಶಿವಮೊಗ್ಗ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ತೀರ್ಥಹಳ್ಳಿ ತಾಲ್ಲೂಕು | 14:06:21' ಮಿಶ್ರಣ | 1583/2023 | ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |